ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್‌ನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 52.

ಅರ್ಜೀದಾರ ಮರಿಯಂಣನು, ಆರಕಲ್‌ಗೂಡು ತಾಲ್ಲೂಕು ಕೃಷ್ಣರಾಜಕಟ್ಟೆ ಹೋಬಳಿ ಮೈನರಾದ ಮಧರನಹಳ್ಳಿ ಸ್ಥಳದ ಬಸವನಹಳ್ಳಿ ಸಿದ್ದೇಗವ್ವಡನ ಮಗ ಲಿಂಗನ ಆಸ್ತಿ ವಿಷಯದಲ್ಲಿ —

ಸದರೀ ಮೈನರಾದ ಲಿಂಗನಿಗೆ ಅರ್ಜಿದಾರನು ಭಾವ ಆಗಬೇಕೆಂಬ ಹಕ್ಕಿನ ಮೇಲೆ ಸದರೀ ಮಧರನಹಳ್ಳಿ ಸ್ಥಳದ ಚಾಮರಾಯನ ಕೋಟಿ ದ್ಯಾವಂಣನ ಮಗ ಮರಿಯಂಣನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜೀ ಕೊಟ್ಟಿರುತ್ತಾನೆ. ಸದರೀ ಅರ್ಜಿಯ ಹಿಯರಿಂಗ್ ಬಗ್ಗೆ 1890ನೇ ಇಸವಿ ಮಾರ್ಚಿ ತಾರೀಖು 14ರಲ್ಲು ವೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

1890ನೇ ಇಸವಿ ಫಿಬ್ರವರಿ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟ್ ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1890ನೇ ಇಸವಿ ಅರ್ಜೀ ನಂಬರ್ 51.

ಅರ್ಜೀದಾರ ಅಹೋಬಲಾಚಾರ್ರು, ಮೈನರಾದ ಮೈಸೂರು ಕಿಲ್ಲೇ ಸ್ಥಳದ ತಬೇಲಿ ಗುಮಾಸ್ತೆ ಸುಬ್ಬಂಣವರ ಮಗ ಕೃಷ್ಣಪ್ಪ ವೆರಫ್ ವೆಂಕಟರಂಗಯ್ಯನ ಆಸ್ತಿ ವಿಷಯದಲ್ಲಿ—

ಸದರೀ ಮೈನರಾದ ಕೃಷ್ಣಪ್ಪ ವೆರಫ್ ವೆಂಕಟರಂಗಯ್ಯನಿಗೆ ಭಾವ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೇ ಸ್ಥಳದ ಅಹೋಬಲಾಚಾರ್ರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾನೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ 1890ನೇ ಇಸವಿ ಮಾರ್ಚಿ ತಾರೀಖು 14ರಲ್ಲು ವೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

1890ನೇ ಇಸವಿ ಫಿಬ್ರವರಿ ತಿಂಗಳು 20 ನೇ ತಾರೀಖಿನಲ್ಲಿ ಕೋರ್ಟ್ ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸಬ್ ಜಡ್ಜ್‌ಯವರ ಕೋರ್ಟ್‌ನಲ್ಲಿ—

ದಿವಾಳಿಯಾದ ಡಿಕ್ರೀ ಜೇಣೇದಾರ ಮೈಸೂರು ಕೃಷ್ಣರಾಜ ವೊಹಲಾದಲ್ಲಿರುವ ಶಿದ್ದರಾಮಯ್ಯನ ವಿಷಯದಲ್ಲಿ—

ಸ್ಯ 1890ನೇ ಇಸವಿ ದಿವಾಳಿ ಕೇಸ್ ನಂಬರ್ 9.

ಹುಕುಂ.

ಮೇಲ್ಕಂಡ ಶಿದ್ದರಾಮಯ್ಯನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟ್ ರೂಬರೂ ಅರ್ಜೀದಾರನಾದ ಶಿದ್ದರಾಮಯ್ಯ ಖುದ್ದು ಹಾಜರು ಮತ್ತು ಸದರೀಯವನ ಲೇಣೇದಾರ್‌ರಾದ 1ನೇ ಲಿಕ್ವಿಡೇಟರಾದ ಸುಬ್ಬರಾಯರ ತರಫ್ ಅಡ್ವೊಕೇಟ್ ಕೃಷ್ಣರಾಯರು ಇವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಶಿದ್ದರಾಮಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿವೋಚಿಸಿ ಮಾಡಿರುವದಲ್ಲದೆ ಇವಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಥಿರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1890ನೇ ಇಸವಿ ಫಿಬ್ರವರೀ 26ನೇ ತಾರೀಖಿನಲ್ಲಿ ಈ ಕೋರ್ಟ್ ವೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್‌ರು ಅಥವಾ ದಾವಾದಾರ್‌ರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ	ಸಾಲಮಗನ	ಯಾವಾಗ ಜೇಣೇ ಉಂಟಾಯಿತು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಮೈಸೂರು ಪುಷ್ಪವತಿ ಬ್ಯಾಂಕ್ ಲಿಕ್ವಿಡೇಟರ್ ಸುಬ್ಬರಾಯರು	192 11 10	△	ಡಿಕ್ರಿಬಾಬತು	

ದಿವಾಳಿಯಾದ ಡಿಕ್ರೀ ದೇಣೇದಾರ ಹಾಸನದಲ್ಲಿ ಯಿರುವ ಜೋಸಫ್ ಸಾಮಿಯೆಲ್‌ನ ವಿಷಯದಲ್ಲಿ—
ಸ್ಯ 1890ನೇ ಇಸವಿ ದಿವಾಳಿ ಕೇಸ್ ನಂಬರ್ 10.

ಹಕುಂ

ಮೇಲ್ಕಂಡ ಜೋಸಫ್ ಸಾಮಿಯಲ್‌ನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಆಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಜೋಸಫ್‌ಸಾಮಿಯಲ್‌ನ ಪರವಾಗಿ ಖುದ್ದು ಹಾಜರು ಮತ್ತು ಸದರಿಯವನ ಲೇಣೇದಾರ್‌ರ ಪರವಾಗಿ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ—1ನೇ ಕುಮ್ಮಾಜಿ 2ನೇ ಗ್ಲಾನೋಜಿ 3ನೇ ಶಿದ್ದಿಖಾ 4ನೇ ಸುಬ್ಬಂಣ 5ನೇ ಹರಿಯಪ್ಪ 6ನೇ ದೆವತ್ತಾ 7ನೇ ಮಾಗೋಜಿ 8ನೇ ಪುಟ್ಟಂಣ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಆಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಜೋಸಫ್ ಸಾಮಿಯಲ್‌ನು ಹೊಂದುವ ದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾಗುವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿವೋಜನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾನ ಸಾಲಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1890ನೇ ಇಸವಿ ಫಿಬ್ರವರಿ 26ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನನ್ನ ದಸ್ತಖತ್‌ನಿನಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರ ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ಉಂಟಾದದ್ದು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಟಿಪ್ಪಣಿ.
1	ಹಾಸನದಲ್ಲಿ ಯಿರುವ ಮುದವಾಡಿ ಕುಮ್ಮಾಜಿ	617—9—		ಡಿಕ್ರಿ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬಾರ್ಡಿನೇಟ್ ಜಡ್ಜ್.

ಕೋಲಾರ ತಾಲ್ಲೂಕು ಕ್ಯಾಲನೂರು ಕಳಾಸಿಧಿ ಕಂಪನಿ ಲಿಮಿಟೆಡ್ ಆಫೀಸಿನಿಂದ.

ಸಮಸ್ತರಿಗೂ ತಿಳಿಯಪಡಿಸುವದೇನಂದರೆ—

ಕೋಲಾರ ತಾಲ್ಲೂಕು ಕ್ಯಾಲನೂರು ಕಳಾಸಿಧಿ ಕಂಪನಿಯೂ ಡಿಟೋ ಕಂಪನಿ ಮೆಂಬರುಗಳು 1890ನೇ ಇಸವಿ ಫಿಬ್ರವರಿ 19 ಮಾರ್ಚಿ 5ನೇ ತಾರೀಖುಗಳಲ್ಲಿ ವಿಂಟಿಂಗ್ ಕೇರಿ ವೈಂಡಪ್ ಮಾಡಬೇಕೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಅದರಂತೆ ಜಾರೀಲಿ ತಂದಿರುತ್ತೆ.

ತಾರೀಖು 13—3—90.

ಕೃಷ್ಣಮೂರ್ತಿರಾವ್,
ಲಿಕ್ವಿಡೇಟರ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವೈನೈಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತಗದುಕೊಳ್ಳುವಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬಿಗೆ ಕಳಿಸಿದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಒಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಒಂದಕ್ಕೆ ರೂ. 4—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0; ಒಂದು ಪೌಂನ್ವುಳ್ಳ ಡಬ್ಬಿಗೆ 17 ರೂ. 8 ಆಣೆ, ಈ ಔಷಧವು ಕಲ್‌ಕತ್ತೆಯಲಿ ಮುಖ್ಯ ಮುಖ್ಯ ಯೂರೋಪಿಯರ್ಸ್ ವ ನೇಟೀವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ, ಸದರೀ ಕಿಮ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ, 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲು, ಒಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.